<u>ಸಾಕ್ಷಿಯನ್ನು ದಿನಾಂಕಃ-06.01.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ಶ್ರೀ ಡಿ.ಕೆ.ಟಿ ಪ್ರತಿವಾದಿ 1 ಮತ್ತು 2 ರ ಪರ ವಕೀಲರಿಂದ</u>

ಸೋಮವಾರ ಪೇಟೆ ಎಸ್ ಬಿ ಐ ನ ವಿಳಾಸ ತ್ಯಾಗರಾಜ್ ರಸ್ತೆ, ಸೋಮವಾರಪೇಟೆ ಮುಖ್ಯ ರಸ್ತೆ. ನಾನು ದಿಃ16.08.2025 ಸೋಮವಾರ ಪೇಟೆಯಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಈಗ ಎಸ್ ಬಿ ಐ ಸೋಮವಾರ ಪೇಟೆ ಯಲ್ಲಿ ಒಂದೇ ಶಾಖೆ ಇರುತ್ತದೆ. ಎಸ್ ಬಿ ಎಮ್ ಬ್ಯಾಂಕ್ ಎಸ್ ಬಿ ಐ ಜೊತೆ ವಿಲೀನವಾಗಿರುತ್ತದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸೋಮವಾರಪೇಟೆ ಯಲ್ಲಿ ಎಲ್ಲಿ ಇರುತ್ತದೆ ಎಂದರೆ ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುಖ್ಯ ರಸ್ತೆ, ಸೋಮವಾರಪೇಟೆ ಎಂಬ ವಿಳಾಸದ ಸೀಲನ್ನು ಹಾಕಿರುತ್ತೇನೆ ಎಂದರೆ ಸರಿ. ನಿಡಿ 9 ಮತ್ತು 12 ರಲ್ಲಿ ಇರುವಂತಹ ಶಾಖೆಯ ವಿಳಾಸ ನಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆಗಿರುತ್ತದೆ ಎಂದರೆ ಸರಿ. ಸದರಿ ಪತ್ರಗಳು ನಮ್ಮ ವಿಳಾಸದಿಂದ ಕಳುಹಿಸಿರುತ್ತೇವೆ ಎಂದರೆ ಸರಿ.

2. ಈ ಹಿಂದೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಎಸ್ ಬಿ ಐ ಗೆ ವಿಲೀನವಾದಾಗ ಐಎಫ್ಎಸ್‌ಸಿ ಕೋಡ್ ಬೇರೆ ಆಗಿದಿಯಾ ಎಂದರೆ ವಿಲೀನವಾದ ನಂತರ ಒಂದೇ ಐಎಫ್ಎಸ್ ಸಿ ಕೋಡ್ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಿಡಿ 16 ರಲ್ಲಿ ನಮೂದಾಗಿರುವಂತಹ ಸೀಲ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸೀಲ್ ನಮ್ಮ ಬ್ಯಾಂಕ್ ಗೆ ಸಂಬಂಧ ಪಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಡಿ 16 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ದಲ್ಲಿ ನಮೂದಾಗಿರುವಂತಹ ಸೀಲ್ ಕಣ್ಣಿಗೆ ಕಾಣಿಸುತ್ತದೆ ಎಂದರೆ ಸರಿ. ಆದರೆ ಸದರಿ ಸೀಲ್ ನಮ್ಮ ಬ್ಯಾಂಕ್ ಗೆ ಸಂಬಂಧ ಪಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

3. ನನ್ನ ಮುಖ್ಯ ವಿಚಾರಣೆಯಲ್ಲಿ ನಮ್ಮ ಬ್ಯಾಂಕಿನ ಸೀಲನ್ನು ಪ್ಲಾಟ್ ಆಗಿ ಹಾಕಿರುತ್ತೇವೆ ಎಂದರೆ ಸರಿ. ನಿಡಿ 16 ರಲ್ಲಿ ಇರುವಂತಹ ಸೀಲ್ ರೌಂಡ್ ಸೀಲ್ ಆಗಿರುತ್ತದೆ. ನಿಡಿ 16 ರಲ್ಲಿ ಒಂದು ಚಿಕ್ಕ ಸಹಿ ಇರುತ್ತದೆ. ನಿಡಿ 16 ರಲ್ಲಿ ನಮೂದಾಗಿರುವ ಸೀಲ್ ನಮ್ಮ ಬ್ಯಾಂಕ್ ಗೆ ಸಂಬಂಧ ಪಟ್ಟಿರುತ್ತದೆ ಎಂದರೆ ಸರಿಯಲ್ಲ. ನಾನು ಈಗ ನ್ಯಾಯಾಲಯಕ್ಕೆ ಹೇಳಿರುವ ವಿಚಾರ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 10 ನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ 10 ರಲ್ಲಿ ನಮೂದಾಗಿರುವಂತಹ ವಿಚಾರವನ್ನು ಪ್ರಾದೇಶಿಕ ವ್ಯವಹಾರಿಕ ಕಚೇರಿಯವರು ಕಳುಹಿಸಿರುವ ಕಾರಣ ನಾನು ಅದರ ವಿಚಾರವನ್ನು ನಾನು ಹೇಳಲು ಆಗುವುದಿಲ್ಲ. ನಿಡಿ 10 ರಲ್ಲಿರುವಂತಹ ವಿಚಾರ ಸರಿ ಇದೆಯಾ ಎಂದರೆ ಸಾಕ್ಷಿಯು ನಾನು

ಹೇಳಲಾಗುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾದೇಶಿಕ ಕಚೇರಿಯಿಂದ ಬಂದು ನಿಡಿ 16ರ ಕೊರಿಯರ್ ಗೆ ಸಂಬಂಧಪಟ್ಟಂತೆ ವಿಚಾರ ಮಾಡಿದ್ದಾರ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಡಿ 16 ರ ಸೀಲ್ ಗೆ ಸಂಬಂಧಪಟ್ಟಂತೆ ನಾವು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಿಡಿ 17 ರಲ್ಲಿ ದಿಃ06.06.2019 ಮತ್ತು ದಿಃ11.06.2019ರ 5ನೇ ಪ್ರತಿವಾದಿಯ ಖಾತೆಯಲ್ಲಿ ಯಾವುದೇ ಹಣ ಇಲ್ಲ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಬ್ಯಾಂಕ್ ಗಳ ವಿಲೀನವಾದ ನಂತರ ಪ್ರಸ್ತುತ ಇರುವಂತಹ ಬ್ಯಾಂಕ್ ನವರು ಬಾದ್ಯರಾಗುತ್ತಾರೆ. ಯಾವುದೇ ಚೆಕ್ಕುಗಳನ್ನು ನಾವು ಬೇರೆ ಬ್ಯಾಂಕ್ ಗೆ ನಗದೀಕರಿಸಲು ಕೊರಿಯರ್ ನ್ನು ಉಪಯೋಗಿಸುವುದಿಲ್ಲ. ಸಾಕ್ಷಿ ಮುಂದುವರೆದು ನಾವು ರಿಜಿಸ್ಟರ್ ಪೋಸ್ಟ್ ಮುಖಾಂತರ ಕಳುಹಿಸುತ್ತೇವೆ ಎಂದು ನುಡಿದಿರುತ್ತಾರೆ. ನಾವು ಕೊರಿಯರ್ ಮುಖಾಂತರ ಸಹ ಚೆಕ್ಕನ್ನ ಕಳಹಿಸುತ್ತೇವೆ ಎಂದರೆ ಸರಿಯಲ್ಲ. ಅಬ್ಬೂರ್ ಕಟ್ಟೆ ವಿಜಯಬ್ಯಾಂಕ್ ನವರು ಚೆಕ್ಕನ್ನು ಕೊರಿಯರ್ ಮುಖಾಂತರ ನಮ್ಮ ಬ್ಯಾಂಕ್ ಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜಯ ಬ್ಯಾಂಕ್ ನವರು ನಮ್ಮ ಬ್ಯಾಂಕಿಗೆ ಚೆಕ್ ಕಳುಹಿಸಿದರೂ ಸಹ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಚೆಕ್ಕಿನ ಹಣ ಪಾವತಿ ತಪ್ಪಿಸಿಕೊಳ್ಳಲು ಅವರಿಗೆ ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಕಿರುವಂತಹ ದಾವೆಗೆ ನಾವೇ ಬಾದ್ಯಸ್ತರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ ಮತ್ತು ಜೆಎಂ.ಎಫ್ ಸಿ

ಸೋಮವಾರಪೇಟೆ